ಶ್ರೀ ಜಗದೀಶ್ ಶೆಟ್ಟರ್ :- ಈ ಮೂರು ಜ್ವಲಂತ ಸಮಸ್ಯೆಗಳು ಇರುವಾಗ ಇದಕ್ಕೆ ಉತ್ತರ ಇಲ್ಲ ಎಂದಾದರೆ ನಾವು ಸದನದಲ್ಲಿ ಏಕೆ ಚರ್ಚೆ ಮಾಡಬೇಕು? ಪ್ರಶ್ನೋತ್ತರ ವೇಳೆ ಇರುವುದಾದರೂ ಏಕೆ?

ಅಧ್ಯಕ್ಷರು :- ಮೊದಲ ಎರಡು ಪ್ರಶ್ನೆಗಳಿಗೆ ಉತ್ತರ ಇಲ್ಲ, ಐಎಎಸ್, ಐಪಿಎಸ್ ಅಧಿಕಾರಿಗಳ ವಿದೇಶ ಪ್ರವಾಸದ ಬಗ್ಗೆ ಉತ್ತರ ಇದೆ.

ಶ್ರೀ ಎಂ. ಚಂದ್ರಪ್ಪ:- ನಾನೇ ಐಎಎಸ್, ಐಪಿಎಸ್ ಆಫೀಸರ್ ಫಾರೀನ್ ಟೂರ್ ಬಗ್ಗೆ ಪ್ರಶ್ನೆ ಕೇಳಿದ್ದೆ. ಆದರೆ ನನಗೆ ಇನ್ನೂ ಉತ್ತರ ಬಂದಿಲ್ಲ.

ಅಧ್ಯಕ್ಷರು:- ಇವತ್ತು ಇಲ್ಲದಿದ್ದರೆ ನೆಕ್ಸ್ಟ್ ವೀಕ್ ತೆಗೆದುಕೊಳ್ಳೋಣ ಇನ್ನೂರು ಪರ್ಸೆಂಟ್ ತೆಗೆದುಕೊಳ್ಳೋಣ.

ಶ್ರೀ ಎಂ. ಚಂದ್ರಪ್ಪ :- ನಾನು ಏಕೆ ಕೇಳಿದೆ ಅಂದರೆ ಇಲ್ಲಿ ಐಎಎಸ್, ಐಪಿಎಸ್ ಅಧಿಕಾರಿಗಳ ಬಗ್ಗೆ ಏನಾದರೂ ಕೇಳಿದ ತಕ್ಷಣ ನಾಯಿ ಬಾಲ ಅಲ್ಲಾಡಿಸುತ್ತದೋ, ಬಾಲ ನಾಯಿಯನ್ನು ಅಲ್ಲಾಡಿಸುತ್ತದೋ ಎಂಬುದು ಗೊತ್ತಾಗುವುದಿಲ್ಲ.

ಅಧ್ಯಕ್ಷರು :- ಚಂದ್ರಪ್ಪನವರೇ, ಇವತ್ತೇ ತೆಗೆದುಕೊಳ್ಳೋಣ.

ಶ್ರೀ ಎಂ. ಚಂದ್ರಪ್ಪ :- ನಾನು ನಾಲ್ಕು ಸಾರಿ ಈ ಪ್ರಶ್ನೆಯನ್ನು ಕೇಳಿದ್ದೇನೆ. ಇದುವರೆವಿಗೂ ಉತ್ತರ ಬಂದಿಲ್ಲ. ಹಾಗಾದರೆ ಸದನಕ್ಕೆ ಬರಬೇಕು.

ಅಧ್ಯಕ್ಷರು:- ನಿಮ್ಮ ಪ್ರಶ್ನೆಯನ್ನು ತೆಗೆದುಕೊಳ್ಳೋಣ. ಉತ್ತರವನ್ನು ಕಳುಹಿಸುತ್ತೇವೆಂದ ಮೇಲೆ ಮತ್ತೇಕೆ ಮಾತು?

ಶ್ರೀ ಎಂ. ಚಂದ್ರಪ್ಪ:- ಉತ್ತರ ಬಂದಿಲ್ಲ, ಅದಕ್ಕೇ, ಕೇಳಿದೆ.

ಅಧ್ಯಕ್ಷರು:- ಉತ್ತರ ಕಳುಹಿಸಿ ಕೊಡುತ್ತೇವೆ. ಅವರಿಗೆ ಉತ್ತರ ಕೊಡಿ. ಸ್ವಲ್ಪ ಲೇಟಾಗಿ ಉತ್ತರ ಬಂತು ಅಷ್ಟೇ ಬೇರೆ ಏನೂ ಅಲ್ಲ. ಮಾನ್ಯ ಎಂಡಿ ಲಕ್ಷ್ಮೀನಾರಾಯಣ್ ನಿಮ್ ಪ್ರಶ್ನೆ ಮುಂದಿನ ವಾರ ತೆಗೆದುಕೊಳ್ಳೋಣ.

ಬೆಂಗಳೂರು ನಗರದ ಮೋರಿ ದುರಸ್ತಿ

167 (1094) ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) ಶ್ರೀ ಪಿ.ಸಿ ಮೋಹನ್, (ಚಿಕ್ಕಪೇಟೆ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಮೋರಿ ದುರಸ್ತಿಗಾಗಿ ಎಷ್ಟು ಕೋಟಿ ರೂ.ಗಳ ಯೋಜನೆ ರೂಪಿಸಲಾಗಿದೆ?

ಆ) ಈ ಯೋಜನೆ ಯಾವಾಗಿನಿಂದ ಹಮ್ಮಿಕೊಳ್ಳಲಾಗುವುದು ಹಾಗೂ ಇದನ್ನು ಖಾಸಗಿ ಸಂಸ್ಥೆಗೆ ವಹಿಸುವ ಒಪ್ಪಂದ ಮಾಡಿಕೊಳ್ಳಲಾಗಿದೆಯೇ?

ಇ) ಇದಕ್ಕೆ ಸರ್ಕಾರ ಬರಿಸುವ ಹಣವೆಷ್ಟು? ಈ ಯೋಜನೆಯೊಂದಿಗೆ ಮಳೆ ನೀರು ನಿರ್ವಹಣೆ ವ್ಯವಸ್ಥೆಯನ್ನು ಕಡ್ಡಾಯ ಮಾಡಲು ಉದ್ದೇಶಿಸಿದೆಯೇ?

ಈ) ಕಳೆದ ಮೇ ತಿಂಗಳಲ್ಲಿ ಬಿದ್ದ ಭಾರಿ ಮಳೆಯಿಂದ ನಷ್ಟವಾದ ಆಸ್ತಿ-ಪಾಸ್ತಿಗಳ ಪ್ರಮಾಣ ಎಷ್ಟು?

ಉ) ಹೂಳು ತುಂಬಿದ್ದು ಈ ಅನಾಹುತಕ್ಕೆ ಕಾರಣವೆಂಬುದು ನಿಜವೇ?

ಊ) ಈ ಹೂಳು ತೆಗೆಸುವ ತಡೆಗೋಡೆ ನಿರ್ಮಾಣ ಮಾಡುವ ಕಾಮಗಾರಿಯಿಂದ ಪಾಲಿಕೆಗೆ ತಗಲುವ ವೆಚ್ಚವೆಷ್ಟು ಇದನ್ನು ಮಳೆಗಾಲದಲ್ಲಿಯೇ ಮಾಡಿಸುವ ಉದ್ದೇಶವಾದರೂ ಏನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :

ಅ) ಬೆಂಗಳೂರು ನಗರದ ಮಳೆ ನೀರಿನ ಮೋರಿ ದುರಸ್ತಿ ಮತ್ತು ಪುನರ್ ನಿರ್ಮಾಣಕ್ಕೆ ಮುಖ್ಯ ಮತ್ತು ಉಪ ಕಾಲುವೆಗಳು ಸೇರಿ ಒಟ್ಟು ಮೊತ್ತವು ರೂ. 180.00 ಕೋಟಿಯಿಂದ ರೂ. 200.00 ಕೋಟಿಗಳಾಗುವ ಯೋಜನೆಯಾಗಿರುತ್ತದೆ.

ಆ) ಈ ಯೋಜನೆಯನ್ನು ಪ್ರಸಕ್ತ ಸಾಲಿನಲ್ಲಿ ಹಮ್ಮಿಕೊಳ್ಳುವ ಯೋಜನೆಯಾಗಿದ್ದು, ಯೋಜನಾ ವರದಿ, ವಿನ್ಯಾಸ, ಅಂದಾಜು ತಯಾರಿಕೆಗೆ ಮತ್ತು ಟೆಂಡರ್ ಪ್ರಕ್ರಿಯೆಗಾಗಿ ಮೇ: ಸ್ಟುಪ್ ಸಲಹೆಗಾರರನ್ನು ನೇಮಿಸಲಾಗಿದೆ. ಇದನ್ನು ಯಾವುದೇ ಖಾಸಗಿ ಸಂಸ್ಥೆಗೆ ವಹಿಸುವ ಒಪ್ಪಂದವನ್ನು ಮಾಡಿಕೊಂಡಿರುವುದಿಲ್ಲ.

ಇ) ಯೋಜನೆಗೆ ತಗಲುವ ಸಂಪೂರ್ಣ ಹಣವನ್ನು ಬೆಂಗಳೂರು ಮಹಾನಗರ ಪಾಲಿಕೆಯಿಂದಲೇ ಭರಿಸಲಾಗುತ್ತದೆ. ಮಳೆ ನೀರು ಚರಂಡಿಗಳ ವ್ಯವಸ್ಥೆಯನ್ನು ಸುಗಮಗೊಳಿಸಲು ಉದ್ದೇಶಿಸಲಾಗಿದೆ. ಈ ಯೋಜನೆಯೊಂದಿಗೆ ಮಳೆ ನೀರು ನಿರ್ವಹಣಾ ವ್ಯವಸ್ಥೆಯನ್ನು ಹೊಸ ಕಟ್ಟಡಗಳಿಗೆ ಕಡ್ಡಾಯಗೊಳಿಸಲು ಇತ್ತೀಚೆಗೆ ಪ್ರಕಟಿಸಿರುವ ಕರಡು ಮಾದರಿ ಬೈಲಾಗಳಲ್ಲಿ ಅಳವಡಿಸಲಾಗಿದೆ.

ಈ) ಅಂದಾಜು 996.00 ಲಕ್ಷ ರೂ.ಗಳ ಮೌಲ್ಯದ ಸಾರ್ವಜನಿಕ ಆಸ್ತಿಗಳಿಗೆ ನಷ್ಟ ಉಂಟಾಗಿದೆ.

ಉ) ಇದು ಸ್ವಲ್ಪ ಮಟ್ಟಿಗೆ ನಿಜ. ಭಾರಿ ಮಳೆಯ ಕಾರಣ ತಗ್ಗು ಪ್ರದೇಶಗಳಲ್ಲಿ ಪ್ರವಾಹ ಉಂಟಾಗಿರುತ್ತದೆ.

ಊ) ಮಳೆಗಾಲದಲ್ಲಿ ಯಾವುದೇ ತಡೆಗೋಡೆಯನ್ನು ನಿರ್ಮಿಸಿರುವುದಿಲ್ಲ. ಮಳೆಗಾಲಕ್ಕಿಂತ ಮುಂಚೆ ಸುಮಾರು 42 ಕಿ.ಮೀ. ಉದ್ದದ 2.15 ಲಕ್ಷ ಚ.ಮೀ. ಗಳಷ್ಟು ಹೂಳನ್ನು ತೆಗೆಯಲಾಗಿದೆ. ಇದಕ್ಕಾಗಿ ರೂ. 1.50 ಕೋಟಿಗಳಷ್ಟು ಹಣ ಈ ವರ್ಷದಲ್ಲಿ ಖರ್ಚಾಗಿರುತ್ತದೆ.

ಶ್ರೀ ಆರ್. ಅಶೋಕ್:- ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಉತ್ತರವನ್ನು ಸರ್ಕಾರದವರು ಕೊಟ್ಟಿದ್ದಾರೆ. ಉತ್ತರದಲ್ಲಿ ಮೇ: ಸ್ಟುಪ್ ಅವರನ್ನು ಸಲಹೆಗಾರರನ್ನಾಗಿ ನೇಮಿಸಲಾಗಿದೆ ಎಂದು ಹೇಳಿದ್ದಾರೆ. ಒಂದು ದುರ್ದೈವ ಎಂದರೆ ಕಳೆದ ಬಾರಿ ಜೆಪಿ ನಗರದಲ್ಲಿ ಒಂದು ಕುಟುಂಬ ಪೂರ್ತಿ ಮೋರಿ ನೀರಿಗೆ ಸಿಕ್ಕಿ ಸತ್ತಾಗ ಈ ಸದನದಲ್ಲಿ 2002ನೇ ಇಸವಿಯಲ್ಲಿ ಈ ಪ್ರಶ್ನೆ ಬಂತು. ಆಗಲೇ ಮಾನ್ಯ ಮುಖ್ಯಮಂತ್ರಿಗಳು ಮಹಾನಗರ ಪಾಲಿಕೆಯ ಅಧಿಕಾರಿಗಳಿಗೆ ನಾನು ಆದೇಶ ಕೊಡುತ್ತಿದ್ದೇವೆ. ಇಮ್ಮೀಡಿಯಟ್ ಆಗಿ ಮುಂದಿ ವರ್ಷಕ್ಕಾಗದರೂ ಮಳೆಗಾಲ ಪ್ರಾರಂಭ ಆಗುವ ಮುಂಚೆ ಮೋರಿ ದುರಸ್ತಿ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂಬ ಕಟ್ಟುನಿಟ್ಟಾದ ಆದೇಶವನ್ನು ಕೊಟ್ಟಿದ್ದೇನೆ ಎಂದು ಹೇಳಿ 9.7.2002 ನೇ ಇಸವಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು. ಆದರೆ ಈಗ ಮಳೆಗಾಲ ಪ್ರಾರಂಭವಾಯಿತು. ಮಳೆಗಾಲ ಪ್ರಾರಂಭ ಆಗುವ ಮುಂಚೆ ಕಾಮಗಾರಿಗಳನ್ನು ಮಾಡುತ್ತೇವೆಂದು ಹೇಳಿದ್ದೀರಿ. ಹೋದ ವಿಧಾನಸಭೆಯಲ್ಲಿ ನೀಡಿದ್ದ ಆಶ್ವಾಸನೆಯನ್ನು ಕಾರ್ಯಗತಗೊಳಿಸಿಲ್ಲ. ಅಂದರೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದಂತಹ ಮಾತುಗಳಿಗೆ ಮಹಾನಗರಪಾಲಿಕೆಯ ಅಧಿಕಾರಿಗಳು ಸ್ಪಂದನೆ ಮಾಡಿಲ್ಲ ಎನ್ನುವ ಉದ್ದೇಶವೋ?

ಇದರ ಅರ್ಥ ಏನು ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು ತಿಳಿಸಬೇಕು. ಪ್ರತಿ ವರ್ಷ ನಾವು ನೋಡುತ್ತಿದ್ದೇವೆ. ಬಹಳ ವರ್ಷಗಳಿಂದ ನೋಡುತ್ತಿದ್ದೇವೆ. ಹೂಳು ಎತ್ತುವ ಕಾರ್ಯವನ್ನು ಮಳೆಗಾಲ ಬಂದಾಗಲೇ ಪ್ರಾರಂಭ ಮಾಡುತ್ತಾರೆ. ಅದೇಕೆ ಮಾಡುತ್ತಾರೆಂಬುದು ಗೊತ್ತಿಲ್ಲ. ಗುತ್ತಿಗೆದಾರರಿಗೆ ಒಳ್ಳೆಯದಾಗಲಿ ಎಂದು ಮಾಡುತ್ತಾರಾ? ಏಕೆಂದರೆ ಮಳೆಗಾಲದಲ್ಲಿ ಕೆಲಸ ಮಾಡಿದರೆ ಮತ್ತೆ ಎರಡು ತಿಂಗಳಿಗೆ ಆ ಕೆಲಸ ಮತ್ತೆ ಮಾಡಬೇಕಾಗುತ್ತದೆ. ಪ್ರತಿ ಮಳೆಗಾಲದಲ್ಲೇ ಈ ಕೆಲಸ ಏತಕ್ಕಾಗಿ ಪ್ರಾರಂಭ ಮಾಡುತ್ತಾರೆಂಬುದನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಜೇಳಬೇಕು. ಮತ್ತೆ ಮಳೆ ನೀರಿನ ನಿರ್ವಹಣೆಯ ವ್ಯವಸ್ಥೆಯ ಬಗ್ಗೆ ಒಂದು ಹೊಸ ತಿದ್ದುಪಡಿ ತಂದು ಮಳೆ ನೀರನ್ನು ಸ್ಟೋರ್ ಮಾಡುವಂತಹ ಕಾನೂನಿನ ಅಡಿಯಲ್ಲಿ ಇವತ್ತು ಎಲ್ಲಾ ಮನೆಗಳಿಗೂ ಒಂದು ಆದೇಶ ತಂದಿದ್ದೇನೆ. ಎನ್ನುವ ಮಾತನ್ನು ಹೇಳಿದ್ದಾರೆ. ಅದನ್ನು ನಾವು ಸ್ವಾಗತ ಮಾಡಿದ್ದೇವೆ. ಎಷ್ಟು ಜನಕ್ಕೆ ಅಪ್ಲೈ ಮಾಡಿದ್ದಾರೆ? ಎಷ್ಟು ಜನ ಅದರ ಅಡಿಯಲ್ಲಿ ಪರ್ಮಿಷನ್ ತೆಗೆದುಕೊಂಡಿದ್ದಾರೆ ಎನ್ನುವುದನ್ನು ಹೇಳಬೇಕು. ಕೊನೆಯ ಪ್ರಶ್ನೆ.

ಅಧ್ಯಕ್ಷರು:- ಒಬ್ಬೊಬ್ಬರು ನಾಲ್ಕು ಪ್ರಶ್ನೆ ಕೇಳಿದರೆ ಅವರು ಉತ್ತರ ಹೇಗೆ ಜೇಳುತ್ತಾರೆ. ನೀವೇ ಹೇಳಿ. ಮೊದಲು ಎರಡು ಕೇಳಿ ಅದಾದ ನಂತರ ಮತ್ತೆ ಕೇಳಿ.

ಶ್ರೀ ಆರ್.ಅಶೋಕ್:- ನಾನು ಎರಡನೇ ಪ್ರಶ್ನೆ ಕೇಳುತ್ತಿರುವುದು.

ಅಧ್ಯಕ್ಷರು:- ಇಲ್ಲ ನೀವು ಮೂರನೇ ಪ್ರಶ್ನೆ ಕೇಳುತ್ತಿರುವುದು.

ಶ್ರೀ ಆರ್. ಅಶೋಕ್:- ಪೀಣ್ಯದಲ್ಲಿ ವಾರ್ಡ್ ನಂಬರ್ - 1 ಬೆಂಗಳೂರಿನಲ್ಲಿ ಬರತಕ್ಕ ವಾರ್ಡ್ ಸುಮಾರು 10 ಎಕರೆ ಪ್ರದೇಶದಲ್ಲಿ ಕೊಳಚೆ ನೀರನ್ನು ಬಿಟ್ಟು ಬಿಟ್ಟಿದ್ದಾರೆ. ಅದರ ಮುಂಭಾಗದಲ್ಲೇ ಕಾಲೇಜು ಇದೆ. ಅದು ಪ್ರೈವೇಟ್ ಕಾಲೇಜು ಆಗಿದ್ದರೆ ಮಾಡಿ ಬಿಡುತ್ತಿದ್ದರೇನೋ? ಅದು ಸರಕಾರೀ ಕಾಲೇಜು ಸುಮಾರು 1000 ಜನ ಓದುತ್ತಿದ್ದಾರೆ. ಪಾಪ ಅವರು ಎಷ್ಟು ಪತ್ರ ಬರೆದಿದ್ದಾರೆ ಮಹಾನಗರಪಾಲಿಕೆಗೆ, ಬೆಂಗಳೂರು ಜಲಮಂಡಲಿಗೆ? ಪೊಲ್ಯೂಷನ್ ಬೋರ್ಡಿಗೂ ಪತ್ರ ಬರೆದಿದ್ದಾರೆ. ಅಲ್ಲಿ ಕಾಮಗಾರಿ ಏಕೆ ಪ್ರಾರಂಭ ಮಾಡುತ್ತಿಲ್ಲ?

ಅಧ್ಯಕ್ಷರು:- ನೀವು ಜನರಲ್ ಪ್ರಶ್ನೆ ಕೇಳಿ, ಇಂಡುವಿಜುಯಲ್ ಪ್ರಶ್ನೆ ಏಕೆ ಕೇಳುತ್ತೀರಿ?

ಶ್ರೀ ಆರ್.ಅಶೋಕ್:- ನಾನು ಕೇಳಿರುವ ಪ್ರಶ್ನೆಗೆ ದಯವಿಟ್ಟು ಉತ್ತರ ಕೊಡಬೇಕು.

ಶ್ರೀ ಪಿ.ಸಿ. ಮೋಹನ್:- ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ಈಗ ಮೆ: ಸ್ಪಪ್ ಸಲಹೆಗಾರರಿಗೆ ವರದಿ ಕೊಡಲು ಹೇಳಿದ್ದಾರೆ. ಈಗ ಸ್ಪಪ್ ಕನ್ಸಲ್ಟೆಂಟ್‌ರವರು ವರದಿ ಕೊಟ್ಟು ಮಳೆಗಾಲದಲ್ಲಿ ಮುಂಚೆ ಕೆಲಸ ಶುರುವಾಗುತ್ತದೆಯೇ ಎಂದು ನಾನು ಕೇಳಲಿಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ:- ಇದು ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿರತಕ್ಕಂಥ ಸಮಸ್ಯೆ. ಪ್ರತಿ ವರ್ಷದ ಮಳೆಗಾಲದಲ್ಲೂ ಕೂಡ ಇಂತಹ ವೈಪರತ್ಯಗಳು ನಡೆಯುತ್ತವೆ. ಇದನ್ನು ಒಂದು ಸಮಗ್ರವಾದ ರೀತಿಯಲ್ಲಿ ಈ ಸಮಸ್ಯೆಯನ್ನು ನಿವಾರಣೆ ಮಾಡಬೇಕು ಎನ್ನತಕ್ಕ ಕಾರಣದಿಂದ ಬೆಂಗಳೂರಿನ ನಾಲ್ಕು ಮುಖ್ಯ ಕಣಿವೆಗಳು ಇವೆ. ಆ ಕಣಿವೆಗಳಲ್ಲಿ 179 ಕಿಲೋ ಮೀಟರ್ ಮುಖ್ಯ ಚರಂಡಿಗಳನ್ನು ರೀಮಾಡೆಲಿಂಗ್ ಮಾಡಬೇಕಾಗಿದ್ದರೆ ಎರಡರಿಂದ ಮೂರು ವರ್ಷಗಳಕಾಲ ತೆಗೆದುಕೊಳ್ಳುತ್ತದೆ. ಸ್ಪಪ್ ಕನ್ಸಲ್ಟೆಂಟ್‌ಗೆ ವಿನ್ಯಾಸ, ಅಂದಾಜುಗಳು ಮತ್ತು ಮತ್ತಿತರ ಟೆಕ್ನಿಕಲ್ ಪ್ಯಾರಾಮೀಟರ್ಸ್ ಇವುಗಳನ್ನು ತೀರ್ಮಾನ ಮಾಡಿ ವರದಿ ಕೊಡಿ ಎಂದು ಹೇಳಿದ್ದೇವೆ. ಆ ವರದಿ ಇನ್ನು ಒಂದು ವಾರ ಅಥವಾ 15 ದಿವಸಗಳಲ್ಲಿ ಬರತಕ್ಕ ನಿರೀಕ್ಷೆ ಇದೆ.

ಕೆಲಸವನ್ನು ಕೂಡಲೇ ಟೆಂಡರ್ ಕರೆದು ಪ್ರಾರಂಭಿಸುತ್ತೇವೆ. ಈ ವರ್ಷ ಮಾನ್ಯ ಸದಸ್ಯರಲ್ಲಿ ಉಂಟಾಗಬಹುದಾದುತಹ ಅನಿಸಿಕೆಗಳನ್ನು ಗಮನಿಸಿ ಪ್ರವಾಹ ಬರುತಕ್ಕಂಥ ಮುಂಚಿನೇ ಮುನ್ನೆಚ್ಚರಿಕೆ ಕ್ರಮಗಳನ್ನು ಏಪ್ರಿಲ್ ತಿಂಗಳಿನಲ್ಲಿಯೇ ಪ್ರಾರಂಭ ಮಾಡುತ್ತಾರೆ. ಕಳೆದ ವರ್ಷದಲ್ಲಿ ಪ್ರವಾಹ ಅನಾಹುತದಿಂದ ಉಂಟಾದ ಎಲ್ಲಾ ಪ್ರದೇಶಗಳನ್ನೂ ತಜ್ಞರ ಮೂಲಕ ತಪಾಸಣೆ ನಡೆಸುತ್ತೇವೆ. ಈ ವರ್ಷ ಅದೇ ತೊಂದರೆ ಮತ್ತೆ ಮರುಕಳಿಸದಂತೆ ನಾವು ಪ್ರಯತ್ನಗಳನ್ನು ಮುಂದುವರಿಸುತ್ತೇವೆ. ಯಾವ ಯಾವ ಚರಂಡಿಯಲ್ಲಿ ಹೂಳನ್ನು ತೆಗೆಬೇಕೋ ಅದೆಲ್ಲವನ್ನೂ ಕೂಡ ಸಕಾಲದಲ್ಲಿ ಮಾಡಿಸಬೇಕು ಎನ್ನುತಕ್ಕ ಕಾರ್ಯಕ್ರಮ ಇದೆ. ಮಳೆ ನೀರಿನ ಸಂಗ್ರಹ ಕಡ್ಡಾಯ ಮಾಡಲು ನಗರಪಾಲಿಕೆಯ ಬೈಲಾಗೆ ತಿದ್ದುಪಡಿಯನ್ನು ಪ್ರಕಟಿಸಿದ್ದೇವೆ. ಆಕ್ಷೇಪಣೆಗಳಿಗೋಸ್ಕರ ಮೂರು ತಿಂಗಳು ಕಾಲಾವಕಾಶವನ್ನು ಕೊಡಬೇಕು. ಆಕ್ಷೇಪಣೆಗಳು ಬಂದ ಮೇಲೆ ನಾವು ಈ ತಿದ್ದುಪಡಿಗಳನ್ನು ಕಾನೂನಾಗಿ ಪರಿವರ್ತನೆ ಮಾಡಿದಂತಹ ಕಾಲದಲ್ಲಿ ಇದು ಹೊಸದಾಗಿ ಮಂಜೂರಿ ಆಗತಕ್ಕ ಎಲ್ಲಾ ನಕಾಶೆಗಳಿಗೂ ಕೂಡ ಕಡ್ಡಾಯ ಆಗುತ್ತದೆ. ಆಗ ಇದನ್ನು ನಾವು ಮುಂದುವರಿಸುತ್ತೇವೆ.

11.30 ಎ.ಎಂ

ಶ್ರೀ ಆರ್.ಅಶೋಕ್ :- ಕಳೆದ ಬಾರಿ ಮಳೆಗಾಲದ ಸಮಯದಲ್ಲಿ ಒಂದೇ ಕುಟುಂಬದ ಸುಮಾರು 8-10 ಜನರು ಧಾರುಣವಾಗಿ ಸಾವನ್ನಪ್ಪಿದ್ದಾರೆ. ಅದಕ್ಕೋಸ್ಕರ, ಸಾವು-ನೋವು ಹಾಗೂ ಆಸ್ತಿ-ಪಾಸ್ತಿಗಳು ನಾಶವಾಗುವುದನ್ನು ತಡೆಗಟ್ಟಲು ಮುಂಜಾಗ್ರತಾ ಕ್ರಮವಾಗಿ ಈ ಸಲ ಮಹಾನಗರ ಪಾಲಿಕೆ ಏನೇನು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ? ಕಳೆದ ಬಾರಿ ಹದಿನೈದು ಕೋಟಿ ರೂಪಾಯಿಗಳಷ್ಟು ಸಾರ್ವಜನಿಕ ಆಸ್ತಿ ನಷ್ಟವಾಗಿದೆ. ಇದನ್ನು ತಡೆಗಟ್ಟಲು ಸರ್ಕಾರ ಹಾಗೂ ಮಹಾನಗರ ಪಾಲಿಕೆ ಯಾವ ಕ್ರಮ ಕೈಗೊಂಡಿದೆ ಎಂಬುದನ್ನು ತಿಳಿಸಬೇಕು.

ಶ್ರೀ ಎಸ್.ಎಂ. ಕೃಷ್ಣ :- ಕಳೆದ ಸಲ ಸುರಿದ ಅಲ್ಪಸ್ವಲ್ಪ ಮಳೆಯಲ್ಲಿಯೇ ಇಷ್ಟೊಂದು ಪ್ರಮಾದಗಳು ಜರುಗಿರಬೇಕಾದರೆ ಈ ವರ್ಷದ ಮಳೆಗಾಲ ಹೇಗೆ ಬರುತ್ತದೋ ಗೊತ್ತಿಲ್ಲ. ನಮ್ಮ ವಿಶ್ವಾಸದಂತೆ ಒಳ್ಳೆಯ ಮಳೆಗಾಲ ಆಗಬಹುದು. ನಾವು ಎಲ್ಲದಕ್ಕೂ ಸಿದ್ಧರಾಗಿರಬೇಕಾಗುತ್ತದೆ. ನಗರಪಾಲಿಕೆಯವರಿಗೆ ಈ ಬಗ್ಗೆ ಸೂಕ್ತ ಸೂಚನೆ ಕೊಡುತ್ತೇನೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ :- ಮಾನ್ಯ ಅಧ್ಯಕ್ಷರೆ, ಕಳೆದ ವರ್ಷ ಮೇಲೆ ತಿಂಗಳಿನಲ್ಲಿ ಸುರಿದ ಭಾರಿ ಮಳೆಯಿಂದ ನಷ್ಟವಾದ ಆಸ್ತಿ-ಪಾಸ್ತಿಗಳ ಪ್ರಮಾಣ ಎಷ್ಟೆಂದು ಕೇಳಿದಾಗ ಅಂದಾಜು 696 ಲಕ್ಷ ರೂಪಾಯಿಗಳೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಆದರೆ ಪರಿಹಾರವನ್ನು ಯಾಮ್ಮಾವ ರೀತಿಯಲ್ಲಿ ಕೊಡಲಾಗಿದೆ ಎಂಬುದು ಬಹಳ ಮುಖ್ಯವಾಗುತ್ತದೆ. ಎರಡನೆಯದಾಗಿ, ಮಳೆ ಸುರಿದಾಗ ನೀರು ಮೋರಿಗಳಿಗೆ ಹೋಗದೆ ರಸ್ತೆಯ ಮೇಲೆಯೇ ಹರಿದು ಹೋಗುತ್ತಿರುವುದನ್ನು ಬೆಂಗಳೂರಿನಲ್ಲಿ ಕಾಣುತ್ತಿದ್ದೇವೆ. ಮೋರಿಗಳ ದುಸ್ಥಿತಿ ಅರಿಯಲು ಮಾನ್ಯ ಮುಖ್ಯಮಂತ್ರಿಗಳು ಕೆಲವು ಸ್ಥಳಗಳಿಗೆ ಅನಿರೀಕ್ಷಿತ ಭೇಟಿ ಕೊಟ್ಟು ಪರಿಶೀಲಿಸಬೇಕಾಗುತ್ತದೆ. The quality of work is also hopeless. ಇದನ್ನು ಪರಿಣಾಮಕಾರಿಯಾಗಿ ಮಾಡಬೇಕು. ಸ್ವಾರ್ಮ್ ವಾಟರ್ ಡ್ರೇನ್ ಹೋಗಲು ಲಾಲ್‌ಬಾಗ್ ಹಿಂಭಾಗದಲ್ಲಿ ಹಮ್ಮಿಕೊಂಡಿದ್ದ ಕಾಮಗಾರಿ ಕಳೆದ ಆರು ತಿಂಗಳುಗಳಿಂದ ಸ್ಥಗಿತಗೊಂಡಿರುವುದರಿಂದ ಇದರ ಬಗ್ಗೆ ಗಮನಹರಿಸಬೇಕು ಮೂರನೆಯದು you are not the main questiones ಮೂರು ಪ್ರಶ್ನೆಗಳನ್ನು ಕೇಳಲು ತಮಗೆ ಅವಕಾಶವೇ ಇಲ್ಲ ಜೊತೆಗೆ ತಾವು ಉತ್ತರದಲ್ಲಿ ಇಲ್ಲದೇ ಇರುವ ಪ್ರಶ್ನೆಗಳನ್ನು ಕೇಳುತ್ತಿದ್ದೀರಿ I canot allow.

ಶ್ರೀ ಕೆ. ಎನ್. ಸುಬ್ಬಾರೆಡ್ಡಿ :- ಇನ್ನೊಂದು ಮುಖ್ಯವಾದ ಪ್ರಶ್ನೆ, ವಿಜಯ ಕಾಲೇಜಿನ ಹಿಂಭಾಗದಲ್ಲಿ ಇದ್ದವರಿಗೆ ಪರಿಹಾರ ಎಷ್ಟು ಕೊಟ್ಟಿದ್ದೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಎಸ್.ಎಂ. ಕೃಷ್ಣ :- ಸತ್ತವರಿಗೆ ಎಷ್ಟು ಪರಿಹಾರ ಕೊಡಲಾಗಿದೆ ಎಂದು ಕೇಳಿರುವುದಕ್ಕೆ ಉತ್ತರವಾಗಿ ಹೇಳುವುದಾದರೆ ಸುಮಾರು ಐವತ್ತು ಸಾವಿರ ರೂಪಾಯಿಗಳಷ್ಟು ಹಮವನ್ನು ವಿತರಿಸಲಾಗಿದೆ. ಆಸ್ತಿಗೆ ಪರಿಹಾರ ಕೊಟ್ಟಿಲ್ಲ. ಕಾರಣ ಇದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ ಲಾಲ್‌ಬಾಗ್ ಕೆರೆಗೆ ಚರಂಡಿ ನೀರು ಹೋಗದಂತೆ ಪ್ರತ್ಯೇಕ ಕೊಳವೆಗಳನ್ನು ಅಳವಡಿಸಿ ಅದನ್ನು ಭೈಪರ್‌ಕೇಟ್ ಮಾಡುವ ಕೆಲಸ ಈಗತಾನೇ ಮುಗಿದಿದ್ದು, ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಬೆಂಗಳೂರು ವಾಟರ್ ಸಪ್ಲೈ ಅಂಡ್ ಸಿವರೇಜ್ ಬೋರ್ಡ್ ಈ ಎರಡೂ ಸಂಸ್ಥೆಗಳು ಜಂಟಿಯಾಗಿ ಸದರಿ ಕಾರ್ಯವನ್ನು ಹಮ್ಮಿಕೊಂಡು ಮುಗಿಸಿರುವುದರಿಂದ ಈ ಎರಡೂ ಸಂಸ್ಥೆಗಳವರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್:- ಮಾನ್ಯ ಮುಖ್ಯಮಂತ್ರಿಗಳು ಉತ್ತರಿಸುವಾಗ ಸತ್ತವರ ಕುಟುಂಬಕ್ಕೆ ಸುಮಾರು ಐವತ್ತು ಸಾವಿರ ರೂಪಾಯಿಗಳಷ್ಟು ಪರಿಹಾರ ಧನ ಕೊಟ್ಟಿದ್ದೇವೆಂದು ಹೇಳಿದರು. ಮಳೆ ದೌರ್ಜನ್ಯ ಒಂದು ತಹ ಇದ್ದರೆ ಸರ್ಕಾರಿ ಯಂತ್ರ ಅಥವಾ ನಗರಪಾಲಿಕೆ ಯಂತ್ರ ಕೆಲಸ ಮಾಡದಿರುವ ದೌರ್ಜನ್ಯ ಇನ್ನೊಂದು ತರಹವಾಗಿದೆ. ಕಳೆದ ವರ್ಷ ಮಳೆ ಬಂದಂಥ ಸಂದರ್ಭದಲ್ಲಿ ರಾಜಾಜಿನಗರದಲ್ಲಿ ವಿನೋದ್ ಎನ್ನುವ ಒಂದು ಮಗು ಮಳೆ ನೀರಿನ ಚರಂಡಿಯಲ್ಲಿ ಸಿಲುಕಿ ಸತ್ತುಹೋಯಿತು. ಮಹಾನಗರ ಪಾಲಿಕೆಯ ಮೇಯರ್ ಹಾಗೂ ಅಧಿಕಾರಿಗಳೆಲ್ಲರೂ ಅವರ ಮನೆಗೆ ಹೋಗಿ ಸಾಂತ್ವನದ ಮಾತುಗಳನ್ನಾಡಿ ಪರಿಹಾರ ಒದಗಿಸಿಕೊಡುವುದಾಗಿ ಹೇಳಿದ್ದರೂ ಇದುವರೆವಿಗೂ ಕೊಟ್ಟಿಲ್ಲ. ಕುಟುಂಬದವರು ಪರಿಹಾರ ಹಣಕ್ಕಾಗಿ ಅಲೆಯುತ್ತಿದ್ದಾರೆ. ಈ ರೀತಿ ಮಾನವನಿಂದ ಆಗುತ್ತಿರುವ ದೌರ್ಜನ್ಯವನ್ನು ಕಡಿಮೆ ಮಾಡುವ ದೃಷ್ಟಿಯಿಂದ ಏನಾದರೂ ಕ್ರಮ ಕೈಗೊಳ್ಳಬೇಕು. ಎರಡನೆಯದಾಗಿ, ಮಳೆ ನೀರು ಚರಂಡಿಯಲ್ಲಿ ಮಾತ್ರ ಹೋಗಬೇಕು. ಬೆಂಗಳೂರಿನಲ್ಲಿ ಇರುವ ದೊಡ್ಡ ಸಮಸ್ಯೆ ಏನೆಂದರೆ, ಮಳೆ ನೀರಿನ ಜೊತೆಗೆ ಒಳಚರಂಡಿಯ ನೀರೂ ಸಹ ಸಿಕ್ಕಾಪಟ್ಟೆ ಹರಿದು ಹೋಗುತ್ತದೆ. ಇದರಿಂದ ಸರ್ಕಾರಕ್ಕೂ ಇವೊತ್ತೂ ಬಹಳ ಸಮಸ್ಯೆಯುಂಟಾಗುತ್ತಿದೆ. ಮಳೆ ನೀರು ಹರಿದುಹೋಗುವ ಮೋರಿಗಳನ್ನು ತಾವು ರಿ-ಮಾಡೆಲಿಂಗ್ ಮಾಡುತ್ತಿರುವ ಈ ಸಮಯದಲ್ಲಿ ಒಳಚರಂಡಿ ನೀರು ಮಳೆ ನೀರಿನ ಚರಂಡಿಯಲ್ಲಿ ಹೋಗದಂತೆ ತಾವೇನಾದರೂ ಕ್ರಮ ಕೈಗೊಳ್ಳುತ್ತೀರಾ?

ಶ್ರೀ ಎಸ್.ಎಂ. ಕೃಷ್ಣ:- ನಮ್ಮ ಉದ್ದೇಶಗಳೆಲ್ಲವೂ ಕೂಡ ಈ ಕಾರಣಕ್ಕಾಗಿಯೇ ಇದೆ. ಅಲ್ಪಸ್ವಲ್ಪ ಕೆಲಸ ಕಾರ್ಯಗಳೇನಾದರೂ ನಡೆದಿದ್ದರೆ ಮಳೆ ನೀರು ಮತ್ತು ಒಳಚರಂಡಿ ನೀರು ಇವೆಲ್ಲವನ್ನೂ ಪ್ರತ್ಯೇಕಗೊಳಿಸುವಂಥಾದ್ದೇ ಆಗಿದೆ. ರಾಜಾಜಿನಗರದ ಒಂದು ಘಟನೆ ಕುರಿತಂತೆ ತಾವು ಈಗ ನನ್ನ ಗಮನ ಸೆಳೆದಿದ್ದೀರಿ. ಆ ಕುರಿತಂತೆ ಈಗ ನನ್ನ ಬಳಿ ವಿವರಗಳಿಲ್ಲ. ವಿವರಗಳನ್ನು ತರಿಸಿಕೊಳ್ಳುತ್ತೇನೆ. ಆದರೆ, ನಾನು ಇಷ್ಟನ್ನು ಮಾತ್ರ ಒಪ್ಪುತ್ತೇನೆ. ಪರಿಹಾರ ಧನ ವಿತರಿಸುವ ಸಂಬಂಧ ನಗರಪಾಲಿಕೆಯವರು ಅಲೆಸತಕ್ಕಂಥ ಪ್ರವೃತ್ತಿಯನ್ನು ಬಿಡಬೇಕಾಗಿದೆ. ಪರಿಹಾರವನ್ನು ಕೊಡುತ್ತೇವೆಂದು ಹೇಳಬೇಕು ಇಲ್ಲವೇ ನಮ್ಮಿಂದ ಸಾಧ್ಯವಿಲ್ಲ, ಕಾನೂನಿನ ಚೌಕಟ್ಟಿನಲ್ಲಿ ಕೂಡಲು ಸಾಧ್ಯವಿಲ್ಲವೆಂಬ ಖಡಾಖಂಡಿತವಾದ ಉತ್ತರವನ್ನು ನಗರಪಾಲಿಕೆಯವರನ್ನು ಅಪ್ರೋಚ್ ಮಾಡುವವರಿಗೆ ತಿಳಿಸಬೇಕಾಗುತ್ತದೆ. ಇದು ಕೆಳಗಿನಿಂದ ಮೇಲಿನವರೆಗೂ ಜಾರಿಗೆ

ಬರಬೇಕಾಗಿರುವ ಒಂದು ಕಾರ್ಯಕ್ಷಮತೆಯಾಗಿದೆಯೆಂದು ಭಾವಿಸಿ, ಇದನ್ನು ಮಹಾನಗರ ಪಾಲಿಕೆಯವರೆಲ್ಲರೂ ಪರಿಪಾಲಿಸುತ್ತಾರೆಂದು ತಿಳಿದಿದ್ದೇನೆ.

ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು:- ಮಾನ್ಯ ಅಧ್ಯಕ್ಷರೆ, ಶಿವಾಜಿನಗರ ಕ್ಷೇತ್ರದಲ್ಲಿ ಒಂದು ದೊಡ್ಡ ಮೋರಿ ಹರಿಯುತ್ತದೆ, ಮೋರಿ ಕಾಮಗಾರಿ ಹಮ್ಮಿಕೊಳ್ಳುವ ಸಂಬಂಧ ಹಣ ಮೀಸಲಿಟ್ಟು ಮೋರಿ ದುರಸ್ತಿಗೊಳಿಸಿ ಬೇಗ ಮುಗಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಆದೇಶಿದ್ದರೂ ಸಹ ಇಲ್ಲಿಯ ತನಕವೂ ಆದೇಶವನ್ನು ಪಾಲಿಸಿರುವುದಿಲ್ಲ. ಮೋರಿ ದುರಸ್ತಿಗೊಳಿಸಲು ಕಳೆದ ವರ್ಷ ಒಂದು ಕೋಟಿ ರೂಪಾಯಿಯನ್ನು ಮೀಸಲಿಡಲಾಯಿತು. ಹೋದ ವರ್ಷ ಮಳೆ ಬಂದ ಸಮಯದಲ್ಲಿ ಮಳೆ ನೀರಿನಲ್ಲಿ ಒಂದು ಮಗು ಸಿಲುಕಿ ಸತ್ತುಹೋಯಿತು. ಮೋರಿಗಳ ದುರಸ್ತಿಗಾಗಿ ಮೀಸಲಿಟ್ಟ ಒಂದು ಕೋಟಿ ರೂಪಾಯಿಯನ್ನು ಇದುವರೆವಿಗೂ ವಿನಿಯೋಗಿಸಿರುವುದಿಲ್ಲ. ಕಾರಣವೇನೆಂದರೆ, ಇವೊತ್ತು ನಾಳೆ ಮಾಡುತ್ತೇವೆಂದು ಹೇಳಿಕೊಂಡು ಮೂರುವರೆ ವರ್ಷಗಳಾದವು. ಇಲ್ಲಿಯ ತನಕವೂ ಮೋರಿ ದುರಸ್ತಿ ಕೆಲಸ ಮಾಡಿಲ್ಲ. ನೀವು ಹೇಳಿದ್ದು ಕೇವಲ ವಿಧಾನಸೌಧಕ್ಕೆ ಮಾತ್ರ ಸೀಮಿತಗೊಂಡು ಅಲ್ಲಿ ವಾಸ್ತವದಲ್ಲಿ ಕಾರ್ಯಾಚರಣೆ ಮಾಡದಿದ್ದರೆ, ತಮ್ಮ ಮಾತಿಗೆ ಗೌರವ ಕೂಡ ಇಲ್ಲದಿದ್ದರೆ ನಾವು ಕೆಲಸ ಮಾಡಿಸುವುದಾದರೂ ಹೇಗೆ?

ಶ್ರೀ ಎಸ್.ಎಂ. ಕೃಷ್ಣ :- ಕಾರ್ಪೊರೇಷನ್ ಸಂಸ್ಥೆಗಳು ನೇರ ಜವಾಬ್ದಾರಿ ಪಡೆದಿದ್ದು, ತೀವ್ರ ಹಸ್ತಕ್ಷೇಪ ಮಾಡುವುದು ಸರ್ಕಾರದ ಉದ್ದೇಶವಲ್ಲ. ಇಲ್ಲಿರುವ ನಾವು-ನೀವು ವಿಕೇಂದ್ರಿಕರಣ ವ್ಯವಸ್ಥೆಯಲ್ಲಿ ನಂಬಿಕೆ ಇಟ್ಟಿರುವವರಾಗಿದ್ದೇವೆ. ಆದುದರಿಂದ, ಇಂತಹ ಅವಶ್ಯಕವಾಗಿ ಆಗಬೇಕಾಗಿರುವ ಸುಧಾರಣೆಗಳು, ಕಾರ್ಯಕ್ರಮಗಳೇನಿವೆ, ಅದನ್ನು ಕಾರ್ಪೊರೇಷನ್ ಬಜೆಟ್‌ನಲ್ಲಿ ಸೇರಿಸಬೇಕು ಮತ್ತು ಸ್ಥಳೀಯ ಶಾಸಕರ ಅಭಿವೃದ್ಧಿ ನಿಧಿಯಲ್ಲಿ ನಲವತ್ತು ಲಕ್ಷ ರೂಪಾಯಿಗಳಿರುವುದರಿಂದ ಇವೆರಡನ್ನೂ ಸೇರಿಸಿ ಇಂತಹ ಕೆಲಸ-ಕಾರ್ಯಗಳನ್ನು ಹಮ್ಮಿಕೊಳ್ಳಬೇಕಾಗುತ್ತದೆ.

ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು :- ಶಾಸಕರ ಅಭಿವೃದ್ಧಿ ನಿಧಿಯಿಂದ ಒಂದು ಕೋಟಿ, ಮೂರು ಕೋಟಿ ರೂಪಾಯಿಗಳ ಕಾಮಗಾರಿಗಳನ್ನು ಹಮ್ಮಿಕೊಳ್ಳುವುದಕ್ಕಾಗುವುದಿಲ್ಲ. ಬೆಂಗಳೂರು ಮಹಾನಗರದಲ್ಲಿ ಓಪನ್ ಡ್ರೇನ್ಸ್ ಎಷ್ಟಿದೆ ಎಂಬುದು ತಮಗೆ ಗೊತ್ತಿದೆ. ಶಾಸಕರ ಅಭಿವೃದ್ಧಿ ನಿಧಿಗೆ ಕೊಡಬೇಕಾಗಿದ್ದ ಇಪ್ಪತ್ತೈದು ಲಕ್ಷ ರೂಪಾಯಿಗಳನ್ನೂ ತಾವು ಕೊಡಲಿಲ್ಲ. ಆ ಹಣ ಸಾಕಾಗುವುದಿಲ್ಲ. ಸಾಕಾಗುವುದಾದರೆ ಅದಕ್ಕೆ ಕೊಡೋಣ. ಬೇಡವೆಂದು ನಾವು ಹೇಳುವುದಿಲ್ಲ. ಮೋರಿ ಕಾಮಗಾರಿಗೆ ಕೊಡೋಣ. ಆದರೆ, ಕಳೆದ ಮೂರು ವರ್ಷಗಳಿಂದಲೂ ಸದರಿ ಕೆಲಸವನ್ನು ಮಾಡಿಸಿಕೊಳ್ಳಲು ನಮ್ಮಿಂದಾಗುತ್ತಿಲ್ಲ. ಕಾಗದಗಳನ್ನು ಬರೆದರೂ ಆಗುವುದಿಲ್ಲ. ತಮ್ಮ ಗಮನಕ್ಕೂ ತಂದರೂ ಆಗುವುದಿಲ್ಲ. ತಾವು ಒಂದು ಸಭೆಯಲ್ಲಿ ಪಾಲ್ಗೊಂಡು "ನಾನು ಇಲ್ಲೆಲ್ಲಾ ಸೈಕಲ್‌ನಲ್ಲಿ ತಿರುಗಾಡಿದ್ದೇನೆ. ನನಗೆ ತುಂಬಾ ಪ್ರೀತಿಪಾತ್ರವಾದ ಜಾಗ ಇದೆಂದು ಹೇಳಿರುವುದಲ್ಲದೆ ಶಿವಾಜಿನಗರದ ಸುತ್ತಮುತ್ತಲೂ ಸಿಮೆಂಟ್ ರಸ್ತೆ ಹಾಕಿಸುತ್ತೇವೆ" ಎಂದು ತಾವು ಹೇಳಿದ್ದು ಎಲ್ಲಾ ಪತ್ರಿಕೆಗಳಲ್ಲೂ ಪ್ರಕಟವಾಯಿತು. ಇಷ್ಟಾದರೂ ನಾವು ಸುಮಾರು ಐವತ್ತು ಕಾಗದಗಳನ್ನು ಮಹಾನಗರ ಪಾಲಿಕೆಗೆ ಬರೆದಿದ್ದೇವೆ. ಅವರನ್ನು ಸಂಪರ್ಕಿಸಿದ್ದೇವೆ. ಮಾನ್ಯ ಅಧ್ಯಕ್ಷರೆ, ತಾವು ಇದನ್ನು ಸಲೀಸಾಗಿ ತೆಗೆದುಕೊಳ್ಳಬಾರದು. ನಾವು ಹೇಳಿದ್ದನ್ನು ತಾವು ಗಣನೆಗೆ ತೆಗೆದುಕೊಳ್ಳಬೇಕು. ಕೆಲಸ

ಮಾಡಿಸಿಕೊಳ್ಳುವ ಸಂಬಂಧ ಕಳೆದ ವರ್ಷ ಬಜೆಟ್‌ನಲ್ಲಿ ಮೀಸಲಿಟ್ಟ ಹಣವನ್ನು ಖರ್ಚು ಮಾಡದಿದ್ದರೆ ನಾವು ಯಾರನ್ನು ಕೇಳಬೇಕು? ಅಲ್ಲಿ ಕೇಳಿದರೆ ಅವರು ಕೆಲಸ ಮಾಡುವುದಿಲ್ಲ.

ಅಧ್ಯಕ್ಷರು :- ತಾವು ಪ್ರಶ್ನೆ ಕೇಳಿ ಇಲ್ಲವೇ ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆ ಸಲ್ಲಿಸುವ ಸಂದರ್ಭದಲ್ಲಿ ಮಾತನಾಡಿ. ಇದು ಪ್ರಶ್ನೋತ್ತರ ವೇಳೆಯಾಗಿರುವುದರಿಂದ ಪ್ರಶ್ನೆ ಸಂಕ್ಷಿಪ್ತವಾಗಿರಬೇಕು. ಈ ವೇಳೆ ಪ್ರಶ್ನೆ ಕೇಳಿ ಉತ್ತರ ಪಡೆಯುವುದಕ್ಕೆ

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು :- ನಮ್ಮ ಸಮಸ್ಯೆಯನ್ನು ಎಲ್ಲಿ ಹೇಳಬೇಕು?

(ಗೊಂದಲ)

ಅಧ್ಯಕ್ಷರು:- ಇವತ್ತು ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡಿ. ಆಗ ನಿಮಗೆ ಅರ್ಧ ಗಂಟೆ ಮಾತನಾಡಲಿಕ್ಕೆ ಅವಕಾಶ ಕೊಡುತ್ತೇನೆ. ಆಗ ಮಾತನಾಡಿ.

(ಗೊಂದಲ)

ಅಧ್ಯಕ್ಷರು:- ಮಹಾನಗರಪಾಲಿಕೆಯಲ್ಲಿ ತಾವೆಲ್ಲಾ ಸದಸ್ಯರು ಅಲ್ಲಿ ಮಾತನಾಡಿ ಇಲ್ಲಿಯೂ ಮಾತನಾಡಿ.

ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು :- ಅಲ್ಲಿಯೂ ಸಹ ಮಾತನಾಡುತ್ತೇನೆ, ಕೆಲಸ ಆಗಲಿಲ್ಲವೆಂದು ಇಲ್ಲಿಯೂ ಮಾತನಾಡುತ್ತೇವೆ.

(ಗೊಂದಲ)

ಶ್ರೀ ಆರ್. ಅಶೋಕ್:-ಅಧ್ಯಕ್ಷರೆ, ತಾವು ಹೇಳಿದಿರಿ, ಮಹಾನಗರಪಾಲಿಕೆಯಲ್ಲಿ ಹೋಗಿ ಮಾತನಾಡಿ ಎಂದು, ಅಲ್ಲಿ ಅವರು ಕಾನೂನು ಮಾಡಿಕೊಂಡಿದ್ದಾರೆ, ಅಲ್ಲಿ ಎಂ.ಎಲ್.ಎ. ಹೇಳಿದ್ದು ಯಾವ ಕೆಲಸವನ್ನೂ ತೆಗೆದುಕೊಳ್ಳುವುದಿಲ್ಲ. ಕಾರ್ಪೊರೇಟರ್ ಹೇಳಿದ್ದನ್ನು ಮಾತ್ರ ತೆಗೆದುಕೊಳ್ಳಬೇಕು ಎನ್ನುವ ಒಂದು ಆದೇಶ ಬಂದಿದೆ, ನಾವೇನು ಹೇಳಿದರೂ ಅವರು ಮಾತನಾಡುವುದಿಲ್ಲ. ಅಲ್ಲಿಗೆ ಹೋದರೆ ವಿಧಾನಸೌಧದಲ್ಲಿ ಹೋಗಿ ಮಾತನಾಡಿ ಎಂದು ಹೇಳುತ್ತಾರೆ.

Mr. SPEAKER:- You have got every right to speak. and also.

(ಗೊಂದಲ)

ಅಧ್ಯಕ್ಷರು:- ಸಚಿವರು ಉತ್ತರಿಸಲು ಅವಕಾಶವನ್ನು ಕೊಡಿ.

ಶ್ರೀ ಡಿ.ಕೆ. ಶಿವಕುಮಾರ್:- ನಾವು ಯಾವ ಕಾರ್ಪೊರೇಷನ್‌ಗಾಗಲೀ ಅಥವಾ ಯಾವ ಲೋಕಲಾ ಬಾಡೀಸ್‌ಗಾಗಲೀ ಬರೀ ಲೋಕಲ್ ಕೌನ್ಸಿಲರ್ಸ್ ಕೆಲಸ ಮಾತ್ರ ಮಾಡಿ ಎಂದು ಯಾವ ಸರ್‌ಕ್ಯೂಲರ್ ಕೊಟ್ಟಿಲ್ಲ ಅಥವಾ ಯಾವ ಆದೇಶವನ್ನು ಕೊಟ್ಟಿಲ್ಲ, ಆ ಭಾವನೆ ತಪ್ಪು, ತಮಗೇನಾದರೂ ಅಭಿಪ್ರಾಯ ಇದ್ದರೆ ತಾವು ಕೊಡಿ ಇಲ್ಲೇ ಉತ್ತರವನ್ನು ಕೊಡುತ್ತೇನೆ. ಎರಡನೆಯದಾಗಿ ತಾವೆಲ್ಲಾ ಲೋಕಲ್ ಬಾಡೀಸ್ ಸದಸ್ಯರು. ತಾವು ಇಲ್ಲಿ ಏನು ಪ್ರತಿಪಾದನೆ ಮಾಡುತ್ತಿದ್ದೀರಿ, ಅದೇ ರೀತಿ ಪ್ರತಿ ಹಂತದಲ್ಲಿ ನಿಮ್ಮನ್ನು ಕನ್ಸಲ್ಟೇಷನ್ ಮಾಡಿಯೇ ಎಲ್ಲಾ ಕೆಲಸ ನಡೆಯುತ್ತದೆ. ನಿಮಗೆ ಎಲ್ಲಾ ತರಹ ಹಕ್ಕು ಕೊಟ್ಟಿದೆ. ಅಲ್ಲಿರುವವರೆಲ್ಲಾ ನಿಮ್ಮ ಶಿಷ್ಯರು, ಬೇರೆ ಯಾರೂ ಅಲ್ಲ ನಿಮ್ಮ ಕೆಲಸವನ್ನೆಲ್ಲಾ ಅವರ ಮುಖಾಂತರವೇ ಮಾಡಿಸಬಹುದು. ಆದುದರಿಂದ ಇಲ್ಲಿ ಎಷ್ಟು ತಾವು ಪ್ರತಿಪಾದನೆ ಮಾಡುತ್ತಿದ್ದೀರಿ ಅದನ್ನು ಅಲ್ಲಿ ಮಾಡಿದರೆ ಬಹುಶಃ ತಮ್ಮ ಕೆಲಸ ಖಂಡಿತವಾಗಿಯೂ ಆಗುತ್ತದೆ.

ಶ್ರೀ ಸಿ.ಆರ್. ಸಗೀರ್ ಅಹ್ಮದ್:- ಅಲ್ಲಿ ಮಾನ್ಯ ಸುಬ್ಬಾರೆಡ್ಡಿಯವರ ಮಾತನ್ನು ಯಾವ ಸದಸ್ಯರು ಕೇಳುವುದಿಲ್ಲ, ಅದೇ ಒಂದು ದೊಡ್ಡ ಸಮಸ್ಯೆ

ಶ್ರೀ ಆರ್. ಅಶೋಕ್:- ಮಾನ್ಯ ಅಧ್ಯಕ್ಷರೇ, ವಸತಿ ಸಚಿವರು ಒಂದು ದಿವಸ ಕೂಡ ಬೆಂಗಳೂರು ಶಾಸಕರನ್ನು ಕರೆಸಿ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಲಿಲ್ಲ.

(ಗೊಂದಲ)

ಅಧ್ಯಕ್ಷರು :- ಶಿವಕುಮಾರ್‌ರವರೇ, ನಗರದ ಎಲ್ಲಾ ಶಾಸಕರನ್ನು ಕರೆಸಿ ಅವರ ಗ್ರೀವಿಯೆನ್ಸ್‌ಸ್ ಏನೇನು ಅನ್ನುವುದನ್ನು ಸ್ವಲ್ಪ ಕೇಳಿ.

ಶ್ರೀ ಡಿ.ಕೆ. ಶಿವಕುಮಾರ್:- ಆಯಿತು, ಕರೆಸಿ ಸಭೆ ನಡೆಸುತ್ತೇವೆ.

ಶ್ರೀ ಆರ್. ಅಶೋಕ್ :- 65 ಲಕ್ಷ ಜನರ ಪ್ರಶ್ನೆಯನ್ನು ನಾವು ಇಲ್ಲಿ ಚರ್ಚೆ ಮಾಡಲು ಅವಕಾಶ.....

ಅಧ್ಯಕ್ಷರು :- ಅಲ್ಲಿ ಉತ್ತರ ಕೊಡದಿದ್ದರೆ ನಾನೇನು ಮಾಡಲಿ?

ಶ್ರೀ ಕೆ.ಎನ್. ಸುಬ್ಬಾರೆಡ್ಡಿ :- ಮಾನ್ಯ ಅಧ್ಯಕ್ಷರೇ, ಈ ಸಮಸ್ಯೆಗಳಿಗೆ ಉತ್ತರ ಕೊಡುವುದು ವಸತಿ ಸಚಿವರಲ್ಲ, ಮಾನ್ಯ ಮುಖ್ಯಮಂತ್ರಿಗಳು ಸಭೆಯನ್ನು ಮಾಡಬೇಕಾಗಿರುವುದು. The onable Chief Minister is incharge of Bangalore City Development, ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಮಾಡಬೇಕಾಗಿರುವ ಕೆಲಸ ಶಿವಕುಮಾರ್‌ರವರನ್ನು ಕೇಳಿದರೆ ಅವರೇನು ಮಾಡುತ್ತಾರೆ...

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ: ಮಾನ್ಯ ಅಧ್ಯಕ್ಷರೇ, ಇದನ್ನು ಕಾರ್ಪೋರೇಷನ್ ಸಭೆಯಾಗಿ ಪರಿವರ್ತನೆ ಮಾಡಲಿಕ್ಕೆ ಸಾಧ್ಯವಿಲ್ಲ. ಇದು ಪ್ರಶ್ನೋತ್ತರ ವೇಳೆ.

ಅಧ್ಯಕ್ಷರು :- ಶ್ರೀ ಯೋಗೀಶ್‌ಭಟ್ಟರೇ, ನಿಮ್ಮ ಪ್ರಶ್ನೆಯನ್ನು ಸಮಾಜ ಕಲ್ಯಾಣ ಇಲಾಖೆಗೆ ವರ್ಗಾಯಿಸಲಾಗಿದೆ. ಶ್ರೀ ಜಯಪ್ರಕಾಶ್ ಹೆಗಡೆಯವರೇ, ನಿಮ್ಮ ಪ್ರಶ್ನೆಗೆ 10 ದಿನಗಳ ಕಾಲಾವಕಾಶ ಕೋರಲಾಗಿದೆ. ಮುಂದಿನ ಪ್ರಶ್ನೆ ಶ್ರೀ ಎನ್.ವಿ. ಪಾಟೀಲ್.

(ಗೊಂದಲ) ,

ಶ್ರೀ ಎನ್. ಯೋಗೀಶ್ ಭಟ್ ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆ ಮಹತ್ವದ್ದು...

ಶ್ರೀ ಕೆ. ಶ್ರೀನಿವಾಸ್‌ಗೌಡ ಕುಡವಹಳ್ಳಿ :- ಮಾನ್ಯ ಅಧ್ಯಕ್ಷರೆ ಅವರು ರೈನ್ ವಾಟರ್ ಬಗ್ಗೆ ಹೇಳುತ್ತಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ :- ಮುಂದಿನ ಪ್ರಶ್ನೆ ಕರೆದಾಗಿದೆ, ಪುನಃ ಹಿಂದಕ್ಕೆ ಹೋಗಲಿಕ್ಕೆ ಸಾಧ್ಯವಿಲ್ಲ.

(ಈ ಹಂತದಲ್ಲಿ ಒಟ್ಟಿಗೆ 5-6 ಜನ ಮಾನ್ಯ ಸದಸ್ಯರು ಮಾತನಾಡತೊಡಗಿದರು)

(ಗೊಂದಲ)

ಅಧ್ಯಕ್ಷರು:- 5-6 ಜನ ಒಟ್ಟಿಗೆ ಎದ್ದು ನಿಂತರೆ ಹೇಗೆ? ಏನನ್ನೂ ಬರೆದುಕೊಳ್ಳಬೇಡಿ, ಪ್ರಶ್ನೋತ್ತರ ವೇಳೆಯಲ್ಲಿ ಈ ರೀತಿ ಅರ್ಧ ಗಂಟೆ ಮಾತನಾಡಿದರೆ ಹೇಗೆ?

Sri B.Chandre Gowda:- We cant go back ತಾವು ಮುಂದಿನ ಪ್ರಶ್ನೆ ಕರೆದಿದ್ದೀರಿ, ಹಿಂದಕ್ಕೆ ಹೋಗುವುದಕ್ಕೆ ಆಗುವುದಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ:- ಬಹಳ ಗಹನವಾದಂಥ ಪ್ರಶ್ನೆ ಕೇಳಿದ್ದಾರೆ. ಬೆಂಗಳೂರು ಕಾರ್ಪೋರೇಷನ್‌ರವರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಎರಡು ನಿಮಿಷ ಅವಕಾಶ ಕೊಡಿ.....

ಅಧ್ಯಕ್ಷರು:- ಶ್ರೀನಿವಾಸಗೌಡರೇ, ಈಗ ಬೇಡ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ:- ಇಷ್ಟೊತ್ತಿಗೆ rain waterharseing ಬಗ್ಗೆ ಮಾತನಾಡಿ ಮುಗಿಸುತ್ತಿದ್ದೆನೆ.

(ಗೊಂದಲ)

Mr. Speaker:- please take your seat I will not allow Don't take down

(Interruptions)

Mr. Speaker:- Next question. Sri N.Y. Patil. Absent.

ಶ್ರೀ ಸುರೇಶ್‌ಬಾಬು ನಿಮ್ಮ ಪ್ರಶ್ನೆಯನ್ನು ಕೇಳಿ

ಶ್ರೀ ಎನ್. ಯೋಗೇಶ್ ಭಟ್ :- ತುಂಬಾ ಸಿಂಪಲ್ ಪ್ರಶ್ನೆ.

ಅಧ್ಯಕ್ಷರು :- ನಿಮ್ಮ ಪ್ರಶ್ನೆಯನ್ನು ವರ್ಗಾಯಿಸಿದ್ದಾರೆ. ಇಲ್ಲಿ ಸಿಂಪಲ್ ಪ್ರಶ್ನೆ ಬರುವುದಿಲ್ಲ.unable I recine a reply from the concurd department I cant include it in the list. That is all.

ಶ್ರೀ ಕೆ. ಜಯಪ್ರಕಾಶ್ ಹೆಗ್ಗಡೆ:- ಆ ದಿವಸ ಹೇಳುವ ಉತ್ತರವನ್ನು ಇಂದು ಹೇಳಬಹುದಾಗಿತ್ತು, ಪ್ರಶ್ನೆಗಳಿಗೆ ಈ ರೀತಿ ಏಕೆ ಉತ್ತರ ಬರುವುದಿಲ್ಲ ಎಂಬುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್:- ಮಾನ್ಯ ಅಧ್ಯಕ್ಷರೇ, ನಾನು ಉಪಪ್ರಶ್ನೆಯನ್ನು ಕೇಳುತ್ತೇನೆ. ಡೆಲಿಬರೇಟ್ ಆಗಿ ಪ್ರತಿ ಸಲ ಈ ಪ್ರಶ್ನೆಗೆ ಉತ್ತರ ಸಿಗುತ್ತಿಲ್ಲ. 4ನೇ ತಾರೀಖು ಇದೇ ಪ್ರಶ್ನೆಯನ್ನು ನಾನು ಕೇಳಿದ್ದೇನೆ. ಆ ದಿನ ನನ್ನ ಪ್ರಶ್ನೆಗೆ ಉತ್ತರ ಸಿಗಲಿಲ್ಲ. ಇವತ್ತು ಜಯಪ್ರಕಾಶ್ ಹೆಗಡೆಯವರ ಪ್ರಶ್ನೆಗೆ ಉತ್ತರ ಸಿಗಲಿಲ್ಲ. ಏಕೆಂದರೆ ಸದನದಲ್ಲಿ ಬಾಕಿ ಮನ್ನಾ ಮಾಡಿದೆ ಎಂದು ಹೇಳುವುದರಿಂದ ಕೆಲವರಿಗೆ ನಾಚಿಕೆ ಆಗಬಹುದೆಂದು ಈ ರೀತಿ ಉತ್ತರ ಕೊಡುತ್ತಿಲ್ಲವೆ?

ಅಧ್ಯಕ್ಷರು:- ನಾನು ಹೇಳುತ್ತೇನೆ, ಯಾವಾಗ ಆದಕ್ಕೆ ಫೈನಲ್ ಆಗಿ ಉತ್ತರವನ್ನು ಕೊಡುತ್ತೀರಿ ಹೇಳಿ?

ಶ್ರೀ ಬಸವರಾಜ್ ಪಾಟೀಲ್ ಹುಮ್ನಾಬಾದ್:-ಮಾನ್ಯ ಅಧ್ಯಕ್ಷರೇ, ಉದ್ದೇಶಪೂರ್ವಕವಾಗಿ ಉತ್ತರವನ್ನು ಕೊಡಬಾರದು ಎಂದು ಏನೂ ಇಲ್ಲ, ಎಲ್ಲಾ ಕಂಪೆನಿಗಳಿಂದ ವಿವರವಾದ ಉತ್ತರ ಬರಬೇಕು. ಆದಷ್ಟು ಬೇಗ ಉತ್ತರ ಕೊಡುವ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್:- ಇದು ಇ- ಗವರ್‌ನನ್ಸ್, ಈ ಮಾಹಿತಿ ಎಲ್ಲಾ ರೆಗ್ಯುಲರ್ ಆಗಿ ಇರುತ್ತದೆ, ಅದನ್ನು ತರಿಸಲಿಕ್ಕೆ ಏನು ಕಷ್ಟ 2.00 ಲಕ್ಷಕ್ಕಿಂತ ಹೆಚ್ಚು ಬಾಕಿ ಇರುವವರು ಯಾರು ಎಂಬ ಮಾಹಿತಿ ಮಾತ್ರ ಬೇಕು.

ಅಧ್ಯಕ್ಷರು :- ಇಡೀ ರಾಜ್ಯದ ಸಂಪೂರ್ಣ ಉತ್ತರವನ್ನು ತರಿಸಬೇಕು.

(ಗೊಂದಲ)

ಶ್ರೀ ಎಸ್.ಎಂ. ಕೃಷ್ಣ :- ಈ ಪ್ರಶ್ನೆಗೆ ಈಗಾಗಲೇ ಉತ್ತರ ಜನಜನಿತವಾಗಿ ಹೋಗಿದೆ. ಯಾರ್ಯಾರು ಎಷ್ಟೆಷ್ಟು ಬಾಕಿ ಕೊಡಬೇಕು ಎಂಬುದಕ್ಕೆ ಹಳೆಯ ಲೆಕ್ಕವನ್ನು ಪುನಃ ಈ ಸದನದ ಮುಂದೆ ಅವರು ಅಪ್‌ಟುಡೇಟ್ ಮಾಡುವುದಕ್ಕೆ ಪ್ರಯತ್ನಿಸುತ್ತಿದ್ದಾರೆ. ಏನಾದರೂ ಡಿವೈಡ್ ಮಾಡಿದ ಮೇಲೆ ತೆರಿಗೆ ಪ್ರಮಾಣ ರಿಸಿವಬಲ್ಸ್ ಜಾಸ್ತಿಯಾಗಿದೆಯೇ ಎನ್ನುವುದನ್ನು ಅಪ್‌ಟುಡೇಟ್ ಮಾಡುತ್ತಿರಬೇಕು. ಮುಂದಿನ ವಾರ ಈ ಪ್ರಶ್ನೆಗೆ ಉತ್ತರವನ್ನು ನಾನು ಒದಗಿಸುವುದಾಗಿ ಭರವಸೆ ನೀಡುತ್ತೇನೆ. ಇದರಲ್ಲಿ ರಹಸ್ಯವಾಗಿಡುವ ಪ್ರಮೇಯರೇನೂ ಇಲ್ಲ, ಈಗಾಗಲೇ ಯಾರ್ಯಾರು ಎಷ್ಟೆಷ್ಟು ಕೊಡಬೇಕು ಅನ್ನುವುದು ಜಗಜ್ಜಾಹೀರಾಗಿದೆ.

ಚಿಕ್ಕನಾಯಕನಹಳ್ಳಿ ಪಟ್ಟಣಕ್ಕೆ ಕುಡಿಯುವ ನೀರಿನ ಕಾಮಗಾರಿಗಳು

171 (928) ಶ್ರೀ ಸುರೇಶ್‌ಬಾಬು ಸಿ.ಬಿ. (ಚಿಕ್ಕನಾಯಕನ ಹಳ್ಳಿ) : ಮಾನ್ಯ ಮುಖ್ಯಮಂತ್ರಿಯವರು) ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿ ಪಟ್ಟಣಕ್ಕೆ ಹೇಮಾವತಿ ನಾಳೆಯಿಂದ ಕುಡಿಯುವ ನೀರು ಒದಗಿಸುವ ಯೋಜೆಯ ಕಾಮಗಾರಿಯು ಅಪೂರ್ಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಆಗಿದ್ದಲ್ಲಿ, ಎಷ್ಟು ದಿನಗಳಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಯವರು) :

ಅ) ಚಿಕ್ಕನಾಯಕನಹಳ್ಳಿ ಪಟ್ಟಣಕ್ಕೆ ಹೇಮಾವತಿ ನಾಲೆಯಿಂದ ಕುಡಿಯುವ ನೀರೊದಗಿಸುವ ಮೂಲ ಅನುಮೋದಿತ ಅಂದಾಜಿನ ಕಾಮಗಾರಿಗಳು ಪೂರ್ಣಗೊಂಡಿದ್ದು ಯೋಜನೆಯನ್ನು ಅಕ್ಟೋಬರ್ 2002 ರಲ್ಲಿ ಚಾಲ್ತಿಗೊಳಿಸಲಾಗಿದೆ. ಮಾಲ ಅನುಮೋದಿತ ಅಂದಾಜಿನಲ್ಲಿ ಅವಕಾಶವಿಲ್ಲದ ಜಲ ಶುದ್ಧೀಕರಣ ಘಟಕ ನಿರ್ಮಿಸುವ ಕಾಮಗಾರಿಯನ್ನು ಹೆಚ್ಚುವರಿಯಾಗಿ ಕೈಗೊಂಡಿದ್ದು, ಈಗಾಗಲೇ ಟೆಂಡರ್ ಕರೆದು ಗುತ್ತಿಗೆದಾರರನ್ನು ನೇಮಿಸಲಾಗಿದೆ.

ಆ) ಈಗಾಗಲೇ ಗುತ್ತಿಗೆದಾರರನ್ನು ನೇಮಿಸಿರುವ ಜಲಶುದ್ಧೀಕರಣ ನಿರ್ಮಾಣದ ಹೆಚ್ಚುವರಿ ಕಾಮಗಾರಿಯನ್ನು ಆಗಸ್ಟ್ 2003ರ ವೇಳೆಗೆ ಪೂರ್ಣಗೊಳಿಸಲಾಗುವುದು.

ಶ್ರೀ ಸಿ.ಬಿ. ಸುರೇಶ್‌ಬಾಬು:- ಮಾನ್ಯ ಅಧ್ಯಕ್ಷರೆ, ಚಿಕ್ಕನಾಯಕನಹಳ್ಳಿ ಪಟ್ಟಣದ ಕುಡಿಯುವ ನೀರಿನ ಯೋಜನೆಗೆ ಸುಮಾರು 8 ಕೋಟಿ 18 ಲಕ್ಷದ ಅಂದಾಜು ವೆಚ್ಚದಲ್ಲಿ ಹೇಮಾವತಿ ಚಾನಲ್‌ನಿಂದ ಒಂದು ತಿಂಗಳ ಕಾಲ ಕುಡಿಯುವ ನೀರನ್ನು ಚಿಕ್ಕನಾಯಕನಹಳ್ಳಿಗೆ ಬಿಟ್ಟಿದ್ದಾರೆ. ಪೈಪ್‌ಲೈನ್ ಆಗಿದೆ. ಕೆರೆಯ ಅಭಿವೃದ್ಧಿ ಮಾಡಲು ಮತ್ತು ಕೆರೆಗೆ ಏನು ಮಳೆಯ ನೀರು ಬರುತ್ತದೆ ಅದನ್ನು ಬೇರೆ ಕಡೆ ಡೈವರ್ಟ್ ಮಾಡಲು ಮತ್ತು ಪಟ್ಟಣದ ಪೂರ್ಣ ನೀರನ್ನು ಡಿಸ್ಟ್ರಿಬ್ಯೂಷನ್ ಮಾಡಲು ಪೈಪ್ ಲೈನ್ ಬೇಕಾಗಿದೆ. ಈ ಮೂರು ಕೆಲಸಕ್ಕೆ ಆರ್ಥಿಕ ಇಲಾಖೆಯವರು ಹಣವನ್ನು ಬಿಡುಗಡೆ ಮಾಡಿಲ್ಲ. ದಯಮಾಡಿ ಹಣವನ್ನು ಬಿಡುಗಡೆ ಮಾಡಿದರೆ ಈ ಕಾಮಗಾರಿ ಪೂರ್ಣವಾಗುತ್ತದೆ. ಚಿಕ್ಕನಾಯಕನಹಳ್ಳಿ ಪಟ್ಟಣದ ಜನತೆಗೆ ಕುಡಿಯುವ ನೀರನ್ನು ಸಮೃದ್ಧಿಯಾಗಿ ಬಿಡಲು ಸಾಧ್ಯವಾಗುತ್ತದೆ. ಚಿಕ್ಕನಾಯಕನಹಳ್ಳಿಗೇನು ಒಳ್ಳೆಯ ಯೋಜನೆಯೇನು ಆಗಿದೆ ಅದನ್ನು ಪೂರ್ಣ ಮಾಡಲು ಎರಡೂವರೆ ಕೋಟಿ ರೂಪಾಯಿಗಳನ್ನು ಆರ್ಥಿಕ ಇಲಾಖೆಯವರು ಬಿಡುಗಡೆ ಮಾಡಬೇಕಾಗಿದೆ, ಆ ಹಣವನ್ನು ದಯಮಾಡಿ ಒದಗಿಸಿಕೊಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳುತ್ತಿದ್ದೇನೆ.